# ಮಾರಿಷಸ್ ನಲ್ಲಿ ಅಂತಾರಾಷ್ಟ್ರೀಯ ಏಕತಾ ಶರಣಮೇಳ

ಮಾರಿಷಸ್, ಜು. 26 ಮಾನವನೊಳಗೆ ಏನೆಲ್ಲ ತಲ್ಲಣ. ಕಾರಣ ಮಾನವ ಬದುಕು ಅತ್ಯಂತ ಸಂಕೀರ್ಣ ಆಗುತ್ತಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಮಾರಿಷಸ್ ದೇಶದ ಪೋಸ್ಟ್ ಲಫಯೆತ್ತೆ ನಗರದಲ್ಲಿ ನಡೆದ ಅಂತಾರಾಷ್ಟ್ರೀಯ ಏಕತಾ ಶರಣಮೇಳದಲ್ಲಿ ಭಾಗವಹಿಸಿ ಮಾತನಾಡಿದ ಶ್ರೀಗಳು, ಬ್ರಹ್ಮಾಂಡವು ವಿಶಾಲವಾಗಿದೆ. ಗಿರಿ-ಪರ್ವತಗಳು, ಸಪ್ತ ಸಾಗರಗಳು, ಅಖಂಡ ಭೂಪ್ರದೇಶ ಮಾತ್ರವಲ್ಲದೆ ಲಕ್ಷಾನುಗಟ್ಟಲೆ ಜೀವಸಂಕುಲವನ್ನು ಹೊಂದಿದೆ. ಅದರೊಟ್ಟಿಗೆ ನವಗ್ರಹಗಳು ಮತ್ತು ಅಸಂಖ್ಯ ನಕ್ಷತ್ರಗಳ ಇರುವಿಕೆಗು ಕಾರಣವಾಗಿದೆ. ಬ್ರಹ್ಮಾಂಡದ ಶಕ್ತಿ ಅಗಾಧವಾಗಿದೆ: ಅಷ್ಟೇ ಅದ್ಭುತವಾಗಿದೆ. ಅಗಾಧ ಶಕ್ತಿಯನ್ನು ಭೇದಿಸಲು ಮಾನವನಿಗೆ ಸಾಧ್ಯವಾಗಿಲ್ಲ. ಬ್ರಹ್ಮಾಂಡದ ಅದ್ಭುತಶಕ್ತಿ ಎಂದರೆ, ಪಂಚಭೂತಗಳು- ಪೃಥ್ವಿ, ಅಪ್ಪು, ತೇಜ, ವಾಯು ಮತ್ತು ಆಕಾಶ. ಪಂಚಭೂತಗಳು ತಮ್ಮದೇ ಆದ ವಿಶಿಷ್ಟ ಶಕ್ತಿಯನ್ನು ಪಡೆದಿರುತ್ತವೆ. ಬ್ರಹ್ಮಾಂಡದ ಶಕ್ತಿಯು ಪಿಂಡಾಂಡದಲ್ಲಿದೆ. ಬ್ರಹ್ಮಾಂಡವನ್ನು ಬಿಟ್ಟು ಪಿಂಡಾಂಡವಿಲ್ಲ. ಪಿಂಡಾಂಡದ ಸೃಷ್ಟಿಯ ಮೂಲ ಬ್ರಹ್ಮಾಂಡ. ಬ್ರಹ್ಮಾಂಡದಲ್ಲಿ ಆಗಾಗ ಪ್ರಕೃತಿ ಪ್ರಕೋಪ ಸಂಭವಿಸುತ್ತದೆ. ಚಂಡಮಾರುತ, ಭೂಕಂಪ, ಮಹಾಪ್ರವಾಹ, ಕಾಡ್ಗಿಚ್ಚು ಹಾಗು ಜ್ವಾಲಾಮುಖಿ ಅಲ್ಲಲ್ಲಿ ಮತ್ತು ಆಗಾಗ ಉಂಟಾಗುತ್ತವೆ. ಮಾನವ ಅತಿಯಾಗಿ ಅನಿಲಗಳ ಉತ್ಪತ್ತಿ ಮಾಡುತ್ತಿರುವುದರಿಂದ ಓಜೋನ್ ಪದರು ದುರ್ಬಲ ಆಗುತ್ತಿದೆ. ಅದರಿಂದಾಗಿ ತಾಪಮಾನ ಅಧಿಕವಾಗುತ್ತ ಸಾಗಿದೆಯೆಂಬುದು ವಿಜ್ಞಾನಿಗಳ ಅನಿಸಿಕೆ ಆಗಿದೆ ಎಂದರು.

ಮಾನವ ಬದುಕು ಇಂದು ಯಾತಕ್ಕಾಗಿ ಸಂಕೀರ್ಣ ಆಗುತ್ತಿದೆ? ಎಂಬುದಕ್ಕೆ ಕಾರಣ ಹುಡುಕಬೇಕಾದ ಅನಿವಾರ್ಯತೆ. ನಿಸರ್ಗದ ಮೇಲಿನ ಅವ್ಯಾಹತ ದೌರ್ಜನ್ಯ. ಕಾಡಿನ ಅತಿಕ್ರಮಣ; ನಗರಗಳ ನಿರ್ಮಾಣ. ಒಂದು ಹಂತದಲ್ಲಿ ನರಕದ ನಿರ್ಮಾಣ. ಅತಿಯಾದ ಸ್ವಾರ್ಥ. ಅತಿಕ್ರಮಣ ಮತ್ತು ಆಕ್ರಮಣ ಮಾನವನ ನೀತಿ ಆಗಿದೆ. ಮಾನವ ಶಕ್ತಿಯು ತಟಸ್ತವಾಗುತ್ತ ನಡೆದಿದ್ದು, ಯಾಂತ್ರಿಕ ಗುಲಾಮಿತನ. ಗುಲಾಮಗಿರಿಯಿಂದ ಪಾರಾದ ಮಾನವ ಯಾಂತ್ರಿಕ ಗುಲಾಮಗಿರಿಗೆ ಒಳಗಾಗಿದ್ದಾನೆ. ಶಾರೀರಿಕ ಶಕ್ತಿಯು ಕ್ಷೀಣಿಸುತ್ತಿದ್ದು, ಅವನ ಆಯುಷ್ಯವು ಕಡಿಮೆ ಆಗುತ್ತಿದೆ. ಒಂದೆಡೆ ಆಯುಷ್ಯ ಕಡಿಮೆಯಾದರೆ, ಮತ್ತೊಂದೆಡೆ ಆರೋಗ್ಯದ ಮೇಲೆ ದುಷ್ಪರಿಣಾಮ. ಕೊರೋನಾದಂತಹ ಕಾಯಿಲೆಗಳು ಮಾನವ ಪ್ರಪಂಚವನ್ನು ಕಾಡುತ್ತಿವೆ. ಬಹಿರಂಗದ ಬದುಕು ಹೀಗೆ ಸಂಕೀರ್ಣವಾಗುತ್ತ ಸಾಗಿದರೆ, ಅಂತರಂಗದ ಬದುಕು ಜಟಿಲವಾಗುತ್ತ ನಡೆದಿದೆ. ಮೌಲ್ಯಗಳಿಲ್ಲದ ಮಾನವ ಪರೋಕ್ಷವಾಗಿ ಮೃಗೀಯಭಾವನೆಗೆ ಒಳಗಾಗುತ್ತಾನೆ. ನಿಯತ್ತು ಕಳೆದುಹೋಗುತ್ತಿದ್ದು, ಅಂತರಂಗವು ಬರಿದಾಗುತ್ತಿದೆ; ಗೊಂದಲದ ಬೀಡಾಗುತ್ತಿದೆ. ಮಾನವನ ಪಾಲಿಗೆ ಶಾಂತಿಯು ಮರೀಚಿಕೆ ಆಗುತ್ತಿದೆ. ಶಾಂತಿ ಇಲ್ಲದ ಮಾನವ ಬದುಕು ಭೂತಾಕಾರ. ಅದ್ಭುತ ಸೃಷ್ಟಿಸಬೇಕಾದ ಮಾನವನೊಳಗೆ ಅಶಾಂತಿಯ ಭೂತ ಹೊಕ್ಕಿದೆ. ಪ್ರತಿಯೊಬ್ಬರಲ್ಲು ಶಾಂತಿಯ ಹುಡುಕಾಟ. ಒಂದೆಡೆ ಹುಡುಕಾಟ; ಮತ್ತೊಂದೆಡೆ ಹುಡುಗಾಟ.

ಮಾನವ ನೀ ಬರಿದೆ ಸುಖವ ಹುಡುಕುವೆಯಲ್ಲ

ಆನಂದಮಯ ಜೀವನ ವಿಧಾನ ಮರೆತು ಕುಳಿತೆಯಲ್ಲ ||ಪ||

ಒಳಹೊರಗೆಲ್ಲ ತುಂಬಿಕೊಂಡಿದೆ ಏನೆಲ್ಲ ಹುಳುಕು

ನಿನ್ನೊಳಗಿನ ತುಮುಲವನೆಲ್ಲ ಇಂದೇ ಹೊರಹಾಕು

ಬಗೆಬಗೆಯ ಬಂಧನಗಳಿಂದ ಆಗಿದೆ ನಮ್ಮೀ ಬದುಕು

ಬಿಡುಗಡೆಯ ಮಾರ್ಗವ ಇಂದೇ ಈಗಲೇ ಹುಡುಕು || 1 ||

ವಸ್ತು ವಾಹನ ಒಡವೆಯಲ್ಲಿ ಸುಖವಿಲ್ಲ ನೋಡು

ಆ ಸುಖವು ಅಸ್ಥಿರವೆಂದು ನೀನು ಅರಿತು ಬಿಡು

ಅತಿಯಾದ ಅನಿವಾರ್ಯತೆಯು ಆನಂದದ ಕೇಡು

ಪರಮಾನಂದದ ಚಿಂತನೆಯನ್ನು ಇಂದೇ ನೀ ಮಾಡು || 2 ||

ಬದುಕನು ಆಸ್ವಾದಿಸುವ ದೃಷ್ಟಿಯು ನಮ್ಮದಾಗಲಿ

ಆಸ್ವಾದಿಸಲು ಹೋದವನು ಅನುಭವಿಯೇ ಆಗಲಿ

ಅನುಭವ ಆನಂದದ ಮೂಲ ಎಂಬ ಭಾವ ಬಲಿಯಲಿ

ಆನಂದಮಯ ಜೀವನ ವಿಧಾನ ನಮ್ಮೆಲ್ಲರದಾಗಲಿ || 3 ||

ಧಾರ್ಮಿಕ ಸಂಸ್ಥೆಗಳು ಮತ್ತು ಧಾರ್ಮಿಕ ನಾಯಕರು ಇಂದು ವ್ಯಕ್ತಿಗತ ಶಾಂತಿ ಕಾಪಾಡಿಕೊಂಡು ಸಾಮಾಜಿಕ ಶಾಂತಿ ನೆಲೆಸುವಂತೆ ನೋಡಿಕೊಳ್ಳಬೇಕಾಗಿದೆ. ಸಾಮಾಜಿಕ ಶಾಂತಿಯು ಹಿಂದೆಂದಿಗಿಂತ ಮುಖ್ಯವಾಗಿದೆ. ಸಾವಿರ ಕೋಟಿ ಇದ್ದವನು ನಿಜವಾದ ಸುಖಿ ಅಲ್ಲ! ಅವನೊಳಗೆ ಏನೆಲ್ಲ ತಳಮಳ, ಇನ್ನಿಲ್ಲದ ಕೋಲಾಹಲ. ಯಾರ ಬಳಿ ಶಾಂತಿ-ಪ್ರೀತಿ ಇರುತ್ತದೊ, ಅವನೆ ನಿಜಸುಖಿ. ಅವನ ಬಳಿ ಸಿರಿ-ಸಂಪತ್ತು ಇಲ್ಲವೆಂಬುದನ್ನು ಬಿಟ್ಟರೆ, ಉಳಿದಂತೆ ಅವ ಶಾಂತಿಪ್ರಿಯ. ಹಣ ಇದ್ದರೆ ಹಲವಾರು ಚಿಂತೆ; ಅದಿಲ್ಲದಿದ್ದರೆ ಒಂದೇ ಚಿಂತೆ. ಬದುಕಿನಲ್ಲಿ ಎದುರಾಗುವ ಕಷ್ಟ, ಸಂಕಟ, ಸಮಸ್ಯೆ ಮತ್ತು ಸವಾಲುಗಳನ್ನು ಆತ ತನ್ನೊಳಗಿನ ಅಖಂಡ ಸಹನೆಯೊಂದಿಗೆ ಜಯಿಸುತ್ತಾನೆ. ಬಹಿರಂಗದಲ್ಲಿ ಶಾಂತಿ; ಅಂತರಂಗದಲ್ಲಿ ಸಹನೆ. ಎರಡನ್ನು ಸಾಧಿಸಬೇಕಿದೆ ಆಧುನಿಕ ಮಾನವ. ಸರ್ವಧರ್ಮದಲ್ಲು ಧ್ಯಾನದ ಪ್ರಕ್ರಿಯೆಗೆ ಅವಕಾಶವಿದೆ. ಭಾರತದ ಋಷಿ-ಮನಿಗಳು ಯೋಗ ಪ್ರತಿಪಾದಕರು. ಈ ದಿಶೆಯಲ್ಲಿ ಪತಂಜಲಿ ಯೋಗ ಪ್ರಚಲಿತ. ಕ್ರೈಸ್ತ ಧರ್ಮದಲ್ಲಿ ಸಾಮೂಹಿಕ ಪ್ರಾರ್ಥನೆ. ಇಸ್ಲಾಂ ಧರ್ಮದಲ್ಲಿ ನಮಾಜ್. ಬೌದ್ಧಧರ್ಮ ಮತ್ತು ಜೈನಧರ್ಮದಲ್ಲಿ ವಿಪಶ್ಯನವೆಂಬ ಧ್ಯಾನ ಹಾಗು ಸಿಖ್ ಧರ್ಮದಲ್ಲಿ ಭಜನೆ. ಬಸವಾದಿ ಶರಣ ಸಂಸ್ಥಾಪಿತ ಶರಣತತ್ವದಲ್ಲಿ ಶಿವಯೋಗ.

ಅಂಗಯ್ಯ ಒಳಗಣ ಲಿಂಗವ ನೋಡುತ್ತ,

ಕಂಗಳು ಕಡೆಗೋಡಿವರಿಯುತ್ತ ಸುರಿಯುತ್ತ ಎಂದಿಪ್ಪೆನೊ?

ನೋಟವೆ ಪ್ರಾಣವಾಗಿ ಎಂದಿಪ್ಪೆನೊ?

ಕೂಟವೇ ಪ್ರಾಣವಾಗಿ ಎಂದಿಪ್ಪೆನೊ?

ಎನ್ನ ಅಂಗವಿಕಾರದ ಸಂಗವಳಿದು,

ಕೂಡಲಸಂಗಯ್ಯಾ, ಲಿಂಗ ಲಿಂಗವೆನ್ನುತ್ತ.

ಶಿವಯೋಗ ಸುಖ; ಪರಮಸುಖ. ಅದು ಜೀವನವನ್ನು ಕಾಡುವ ದುಃಖವನ್ನು ನಿವಾರಿಸಬಲ್ಲುದು. ಮಾನವನನ್ನು ಕಾಡುತ್ತಿರುವ ರೋಗಕ್ಕೆ ಶಿವಯೋಗ ಒಂದು ಪರಿಹಾರ. ಶಿವಯೋಗವು ಪರಿಣಾಮಕಾರಿ ಆಗಿರಬೇಕಾಗುತ್ತದೆ. ಯಾರು ಶಾಂತಿ-ಸಹನೆಯನ್ನು ಶಿವಯೋಗದಂತಹ ಮಾರ್ಗದಿಂದ ಸಾಧಿಸುತ್ತಾರೊ, ಅಂಥವರು ತಮ್ಮ ಜೀವನದಲ್ಲಿ ಸಾಧನೆ ಮಾಡುತ್ತ ಸಾಗುತ್ತಾರೆ.

ಆಧುನಿಕ ಜಗತ್ತಿನಲ್ಲಿ ಮೊಬೈಲ್ ಏನೆಲ್ಲ ಪಾತ್ರವನ್ನು ನಿರ್ವಹಿಸುತ್ತದೆ. ಗೂಗಲ್ ಕ್ಷಣಾರ್ಧದಲ್ಲಿ ಗ್ಲೋಬಲ್ ಮಾಹಿತಿ ತಂತ್ರಜ್ಞಾನ (ಐಟಿ ಮತ್ತು ಬಿಟಿ). ಈ ಸಂಸ್ಥೆಗಳನ್ನು ನಡೆಸುವ ಮತ್ತು ಹೊಸ ಹೊಸ ಆವಿಷ್ಕಾರ ಮಾಡುವವರಲ್ಲಿ

ಅತ್ಯಧಿಕ ಸಂಪತ್ತು. ಕಾರಣ ಅವುಗಳ ಮೇಲಿನ ಪೇಟೆಂಟ್. ಅಂಥ ಸಂಸ್ಥೆಗಳ ಅಡಿಯಲ್ಲಿ ಲಕ್ಷೋಪಲಕ್ಷ ಜನರಿಗೆ ಉದ್ಯೋಗ ಸೃಷ್ಟಿ. ಶಿವಯೋಗವು ಶಾಂತಿ-ಸಹನೆಯ ಮಾರ್ಗವಾದರೆ ಮುಂದೆ ಅದು ಉದ್ಯೋಗ ಸೃಷ್ಟಿಗೆ ಕಾರಣ ಆಗುತ್ತದೆ. ಶಿವಯೋಗ; ಬದುಕಿಗೆ ಉದ್ಯೋಗ. ಅಪರೋಕ್ಷವಾಗಿ ವ್ಯಷ್ಟಿ ಮತ್ತು ಸಮಷ್ಟಿ ಪ್ರಗತಿ. ಮತಿ ಮತ್ತು ಗತಿ ಇದ್ದಲ್ಲಿ ಪ್ರಗತಿ.

ಮತಿ + ಗತಿ = ಪ್ರ-ಗತಿ

ಇಂದು ಉದ್ಯೋಗ ಮತ್ತು ಉತ್ಪಾದನೆ: ಅಂದು ಕಾಯಕತತ್ವದ ಪ್ರತಿಪಾದನೆ. ಅದರ ಸಮರ್ಥ ನಿರ್ವಹಣೆ. ಅದರಿಂದಾಗಿ ಸಮಸಮಾಜ ಸ್ಥಾಪನೆ. ಪ್ರತಿವ್ಯಕ್ತಿ ವೈಯಕ್ತಿಕ ಸಾಧನೆ ಮುಖಾಂತರ ಪ್ರಗತಿಯತ್ತ ಸಾಗಬೇಕು. ಅದರೊಂದಿಗೆ ಸಾಮಾಜಿಕ ಸಂವರ್ಧನೆಗೂ ಕಾರಣವಾಗಬೇಕು. ಇಂದಿನ ಅನಾರೋಗ್ಯಕರ ವಿದ್ಯಮಾನವೆಂದರೆ, ಹಣದ ಶೇಖರಣೆ. ಅದು ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತ ಆಗುವುದಕ್ಕಿಂತ ಕೊನೆಯಪಕ್ಷ ಉದ್ಯೋಗ ಸೃಷ್ಟಿಸುವ ಕೇಂದ್ರಗಳನ್ನು ಸ್ಥಾಪಿಸುವಂತಾದರೆ ಸ್ವಾವಲಂಬಿ ಬದುಕು ಸಾಧ್ಯ. ಕೋಟ್ಯಾಧಿಪತಿಗಳು ಇತ್ತ ಗಮನಹರಿಸಿದರೆ, ಹಗರಣ ರಹಿತ ಜೀವನ ಸಾಧ್ಯ. ತನ್ಮೂಲಕ ಪ್ರತಿಯೊಬ್ಬರ ಬದುಕಿನಲ್ಲಿ ನೆಮ್ಮದಿ.

ತಿಪಟೂರು ಷಡಕ್ಷರ ಮಠದ ಶ್ರೀ ರುದ್ರಮುನಿ ಸ್ವಾಮಿಗಳು, ಶರಣಸಾಹಿತಿ ರಂಜಾನ್‌ದರ್ಗಾ ಮಾತನಾಡಿದರು. ಹರಗುರು ಚರಮೂರ್ತಿಗಳು, ಭಕ್ತಾದಿಗಳು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.




